ಕೇಳಿದರು. 'ಅದು ಇಪ್ಪತ್ತನಾಲ್ಕು ಗಂಟೆಯೂ ನನ್ನ ಜೊತೆಯಲ್ಲೇ ಇರುತ್ತದೆ. ಎಲ್ಲರಿಗೂ ಅವರವರ ಕೆಲಸಕ್ಕೆ ಸಂಬಂಧಪಟ್ಟಂತೆ ಅವರವರ ಹತ್ಯಾರು ಇರುತ್ತದೆ. ಎಲೈಸಿ ಆಫೀಸರರ ಬಳಿ ಅವರ ಬ್ಯಾಗ್ ಇರುವುದಿಲ್ಲವೇ? ಅಡಿಗೆಯವರ ಕೈಲಿ ಸವುಟು ಇರುವುದಿಲ್ಲವೇ? ಹಾಗೇ ಇದೂ ಕೂಡಾ.' ಎಂದವನು ಉತ್ತರಿಸಿದ. 'ನಿನ್ನನ್ನು ಮರ ಕಡಿಯಲು ಡಿಪಾರ್ಟ್‌ಮೆಂಟಿನವರು ಕಳಿಸಿದ್ದಲ್ಲವೇ?' ಎಂಬ ಪ್ರಶ್ನೆಗೆ ಅವನು 'ಹಾಗೆ ಮರ ಕಡಿಯುವಾಗ ಡಿಪಾರ್ಟ್‌ಮೆಂಟಿನಿಂದ ಯಾರಾದರೂ ಎದುರು ಇರಬೇಕೆಂದು ಹೇಳಿದ್ದಲ್ಲದೆ ಮರ ಕಡಿಯಲು ನನಗೆ ಹೇಳಿಲ್ಲ. ದೇವರ ಮರ ಕಡಿಯಲು ನಾನು ತಯಾರಿಲ್ಲ' ಎಂದ.

ಅವನಿಗೇನಾದರೂ 'ದಕ್ಷಿಣೆ' ಕೊಟ್ಟರೆ ಮರ ಕಡಿದಾನು ಎಂಬ ಸಲಹೆ ಬಂತು. ಆದರೆ ದಕ್ಷಿಣೆ ಕೊಡಲು ಪಂಚಾಯತ್ ಸ್ಯಾಂಕ್ಷನ್ ಇಲ್ಲವಲ್ಲ. ಇವನು ಕೇಳಲೊಲ್ಲ. ಸ್ವತಃ ಪಂಚಾಯತ್ ಅಧ್ಯಕ್ಷರೇ, 'ದೇವರು ಹಾವಿನ ರೂಪದಲ್ಲಿ ಹೊರಟುಹೋಗಿದ್ದಾನೋ. ನೀನೇ ನೋಡಿದ್ದೀಯಲ್ಲ? ಈಗ ಅದನ್ನು ಕಡಿದರೆ ಯಾವ ಪಾಪವೂ ಬರುವುದಿಲ್ಲ.' ಎಂದು ಅವನನ್ನೆಬ್ಬಿಸುವ ಪ್ರಾಮಾಣಿಕ ಪ್ರಯತ್ನವನ್ನೂ ಮಾಡಿದರು. ಅದಕ್ಕವನು, 'ಆಯ್ತು. ಕಡಿಯುತ್ತೇನೆ. ಆದರೆ ಮೊದಲು ಬೇರೆ ಯಾರಾದರೂ ಸರಿಯಾಗಿ ಮೂರು ಕೊಡಲಿ ಏಟು ಹಾಕಿ ತೋರಿಸಲಿ. ಆ ಮೇಲೆ ನಾನು ಕಡಿಯುತ್ತೇನೆ' ಎಂದ.

ಮೊದಲು ಕೊಡಲಿ ಏಟು ಹಾಕುವವರಾರು? ಆ ಮಾತು ಕೇಳಿ ಜನರೆಲ್ಲ ಒಮ್ಮೆಲೇ ಸ್ತಬ್ಧರಾದರು. ಪೂಜೆ ಮಾಡಿ ಪುನೀತರಾದ ಅರ್ಚಕರು 'ನಮ್ಮದು ಪೂಜೆ ಮಾಡುವುದಷ್ಟೇ ಕೆಲಸ, ಕೊಡಲಿಯ ಏಟು ಹಾಕುವುದು ನನ್ನ ಕೆಲಸವಲ್ಲ' ಎಂದು ಹರಿವಾಣದಲ್ಲಿ ಬಿದ್ದ ಹಣವನ್ನೆಲ್ಲ ಒಟ್ಟು ಮಾಡಿ ಸೊಂಟಕ್ಕೆ ಸಿಕ್ಕಿಸಿ ಹೊರಟು ಹೋದರು. ಪಂಚಾಯತ್ ಬೋರ್ಡಿನಲ್ಲಿ ಹೇಳಿದ ಎಲ್ಲ ಕೆಲಸವನ್ನೂ ಮಾಡುತ್ತಿದ್ದ ಚಪರಾಸಿ ಹಬ್ಬದ ಸಲುವಾಗಿ ತನ್ನ ಸಂಸಾರದ ಜೊತೆ ಬಂದವನು ಮಗುವನ್ನು ಹೆಗಲ ಮೇಲೆ ಏರಿಸಿ ಹೆಂಡತಿಯೊಡನೆ ನೋಡನೋಡುತ್ತಿದ್ದಂತೆಯೇ ಹೋಗಿಬಿಟ್ಟ. ಈ ಪೂಜೆ, ದೇವರು ಮರದಲ್ಲಿ ವಾಸವಿದ್ದಾನೆ ಎಂದೆಲ್ಲ ಹೀಗಳೆದರೂ ತಮಾಷೆ ನೋಡಲು ಬಂದ ಬುದ್ಧಿಜೀವಿಗಳೆಂದು ಹೆಸರಾದವರು ಮೆತ್ತಗೆ ಜಾರಿಕೊಂಡರು.

ಊರ ಮುಖಂಡರು? ಅವರ ಮಾತು ಬಿಡಿ. ಅವರು ಮರ ಕಡಿಯುವುದೇ? ಪಂಚಾಯತ್ ಬೋರ್ಡಿನ ಅಧ್ಯಕ್ಷರು ಪೂಜೆಯಾಗುವಾಗ, ಹಾವು ಓಡಿಸುವಾಗ, ಮುಂತಾದ ಗೊಂದಲಗಳ ನಡುವೆ ಜಿಲ್ಲಾಕೇಂದ್ರದಿಂದ ಬಂದಿದ್ದ ಹೆಗಲ ಮೇಲೆ ಶಾಲು ಹೊದದುಕೊಳ್ಳುವ ಅಭ್ಯಾಸವಿದ್ದ ಒಬ್ಬರ ಗುರುತು ಹಿಡಿದಿದ್ದರು. ಅವರತ್ತ ಮುಗುಳುನಗೆಯನ್ನು ಹಾಯಿಸಿದಾಗ ಅವರು ಮರುನಗೆ ಬೀರಿರಲಿಲ್ಲ. ಹಾಗಾಗಿ ಈ ಮರ ಕಡಿಯುವ ಉಪದ್ವ್ಯಾಪ ಆದಷ್ಟು ಬೇಗ ಮುಗಿದರೆ ಒಳ್ಳೆಯದಿತ್ತು ಎಂಬ ಹಪಹಪಿಯಲ್ಲಿದ್ದರು. ಕೊನೆಗೆ ಮರ ಕಡಿಯುವ ಅಗತ್ಯ ಯಾರಿಗಾಗಿ, ಮೂಸಬ್ಬನಲ್ಲವೇ ಅವನೇ ಮೊದಲ ಮೂರು ಕೊಡಲಿ ಏಟು ಹಾಕಲಿ ಎಂದು ಸಲಹೆ ಮುಂದೆ ಬಂತು. ಮೂಸಬ್ಬನನ್ನೇ ಎಲ್ಲರೂ ಮುಂದೆ ತಳ್ಳಿದರು.

ಮೂಸಬ್ಬ ಅನಿವಾರ್ಯವಾಗಿ ಮುಂದೆ ಬಂದ. ಯಾರೋ ಅವನ ಕೈಗೆ ಫಾರೆಸ್ಟ್ ಗಾರ್ಡಿನ ಕೊಡಲಿಯನ್ನು ಕೊಟ್ಟರು. ಶಾಲು ಹೊದೆಯುವ ಅಭ್ಯಾಸವುಳ್ಳ ವ್ಯಕ್ತಿ ಗುಂಪಿನಲ್ಲಿ ಜಾಗ ಮಾಡಿ ಮುಂದೆ ಬಂದ. ಪಂಚಾಯತ್ ಬೋರ್ಡಿನ ಅಧ್ಯಕ್ಷರು ಉಸಿರುಗಟ್ಟಿ ಆತಂಕದಿಂದ ನಿಂತರು.